# ಆಗುಂಬೆ ಕಾಡಿನಲ್ಲಿ ಕಂಡ ಹಸಿರು ಚೆಲುವ



**ಮೋಹಕ ಹಸಿರು ಮೈಬಣ್ಣದಿಂದ ಹೊಳೆಯುವ 'ಹಸಿರು ಹಾವು', ಮಲೆನಾಡಿನ ಮನೆಗಳ ಅಂಗಳಕ್ಕೆ ಆಗಾಗ ಬಂದುಹೋಗುವ ನೆಂಟ, ನಿಜಕ್ಕೂ ಪಾಪದ ಪ್ರಾಣಿ.**

■ ಪ್ರಸಾದ ಶೆಣೈ ಆರ್.ಕೆ.

ಆಗುಂಬೆಯ ಮಲ್ಲಂದೂರು ಎನ್ನುವ ಪುಟ್ಟ ಊರಿನ ಕಾಡುದಾರಿಯಲ್ಲಿ ಮಳೆ ಸುರಿದು ಆಗಷ್ಟೇ ನಿಂತಿತ್ತು. ನಾಟಿ ಕೆಲಸ ಮುಗಿದು ಭತ್ತದ ಸಸಿಗಳು ಮಳೆಗೆ ಮೈಯೊಡ್ಡಿಕೊಂಡಿದ್ದವು. ಗದ್ದೆಯ ಎರಡು ದಿಕ್ಕಿಗೂ ಕಾವಲುಗಾರರಂತೆ ಅಚಲವಾಗಿ ನಿಂತಿದ್ದ ಬೆಟ್ಟಗಳ ಸಾಲುಗಳು ಅಷ್ಟೂ ಹೊತ್ತು ಮಳೆಗೆ ಮಿಂದೆದ್ದರೂ ಮಳೆ ಸಾಲಲಿಲ್ಲ ಎನ್ನುವಂತೆ ಮೋಡಗಳನ್ನು ಕರೆಯುತ್ತ, ಇನ್ನಷ್ಟು ಮಳೆ ಸುರಿಸಿ ಎಂದು ಅಹವಾಲು ಸಲ್ಲಿಸುವಂತೆ ತೋರುತ್ತಿದ್ದವು.

ಇಂತಹ ಒಂದು ರಮ್ಯ ಗಳಿಗೆಯಲ್ಲಿ ಸುತ್ತಲಿನ ನಿಸರ್ಗದ ಮೌನವನ್ನೂ, ಚೆಲುವನ್ನೂ ಸವಿಯುತ್ತ ಬರುತ್ತಿರುವಾಗ 'ಹೋ, ಗ್ರೀನ್ ವೈನ್ ಸ್ನೇಕ್' ಎಂದು ಗೆಳೆಯ ಕಾರು ನಿಲ್ಲಿಸಿ, ಸೀದಾ ಹಾವಿದ್ದ ಜಾಗಕ್ಕೆ ನಡೆದರು.

ಹಸಿರ ನಡುವೆ ಹಸಿರೇ ಆಗಿ ಹೂಮಾಲೆಯಂತೆ ತೂಗಿ ಕೂತಿದ್ದ ಹಸಿರು ಹಾವು ಸಾಮಾನ್ಯ ದೃಷ್ಟಿಗೆ ಕಾಣಿಸುವಂತಿರಲಿಲ್ಲವಾದರೂ, ಕಾಡುಗಳಲ್ಲಿ ಹಾವು, ಕಪ್ಪೆ, ಕೀಟ ಪ್ರಪಂಚದ ಕುರಿತು ಅಧ್ಯಯನ, ಫೋಟೊಗ್ರಫಿ ಮಾಡುತ್ತಿರುವ ನನ್ನ ಗೆಳೆಯನ ದೃಷ್ಟಿಗೆ ಬಿದ್ದದ್ದು ಸೋಜಿಗವೇನಲ್ಲ. ನಾವು ಹತ್ತಿರ ಹೋಗಿ ನಿಂತದ್ದೇ, ಹಸಿರು ಹಾವು ಬಾಯಲ್ಲೇ ಬ್ರಹ್ಮಾಂಡ ತೋರಿಸುತ್ತ ಉದ್ದಗಿನ ಚೂಪಾದ ನಾಲಗೆಯನ್ನು ಜೋಕಾಲಿಯಂತೆ ಆಡಿಸುತ್ತ, ನಿಂತಲ್ಲೇ ತೂಗುತ್ತ, ತನ್ನ ಮೈಮೇಲಿರುವ

